(ಇಂದು ದಿನಾಂಕ 22-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಡಿ.ಆರ್. ವಕೀಲರಿಂದಃ**

ದಾವಾಸ್ತಿಯಲ್ಲಿ ಭೂ ನ್ಯಾಯಮಂಡಳಿಯ ಆದೇಶದ ಪ್ರಕಾರ ಪ್ರತಿವಾದಿಯವರಿಗೆ 11 ಗುಂಟೆ ಕ್ಷೇತ್ರ ಮಂಜೂರು ಆಗಿರುತ್ತದೆ. ನಾನು ದಾವೆ ಸಲ್ಲಿಸುವ ಸಮಯಕ್ಕೆ ದಾವಾಸ್ತಿಯ ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡಿದ್ದು ಇರುವುದಿಲ್ಲ. ವಾದ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ. ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ದಾಖಲೆಗಳನ್ನು ಪರಿಶೀಲನೆ ಮಾಡಿ ಮಾಹಿತಿಯನ್ನು ನೀಡಿರುತ್ತೇನೆ. ದಾವಾಸ್ತಿಯ ಸ.ನಂ. 53 ಹಿಸ್ಸಾ 2 ಯಾವಾಗ ಪೋಡಿಯಾಯಿತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾಸ್ತಿಯ ಪೋಡಿ ಆಗುವ ಸಮಯಕ್ಕೆ ಭೂಮಾಪನ ಮೋಜಣಿ ಇಲಾಖೆಯಿಂದ ಯಾವುದೇ ನೋಟೀಸ್ ಬಂದಿದ್ದು ಇರುವುದಿಲ್ಲ. ದಾವಾಸ್ತಿಯ ಮೋಜಣಿ ಆಗಬೇಕೆಂದು ನಾನು ಭೂಮಾಪಕರಿಗೆ ಯಾವುದೇ ಅರ್ಜಿಯನ್ನು ನೀಡಿದ್ದು ಇರುವುದಿಲ್ಲ. ದಾವಾಸ್ತಿಗೆ ಸಂಬಂಧಪಟ್ಟಂತೆ ತಹಶೀಲ್ದಾರ ಕಚೇರಿಗೆ ಹೋಗಿ ದಾಖಲೆಗಳನ್ನು ಪರಿಶೀಲನೆ

ಮಾಡಿದ್ದು ಇರುವುದಿಲ್ಲ. ಅಸಲು ದಾವಾ ಸಂಖ್ಯೆ 120/2011 ರಲ್ಲಿ ಆಗಿರುವ ತೀರ್ಪಿನ ಮಾಹಿತಿ ನನಗೆ ಇರುವುದಿಲ್ಲ. ಸದರಿ ದಾವೆಯ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಪ್ರತಿವಾದಿಯವರು ಸಲ್ಲಿಸಿದ್ದು, ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ತಂದೆ ದಾವಾಸ್ತಿಯ ಸ.ನಂ. 53 ಹಿಸ್ಸಾ 3 ರಲ್ಲಿ ಯಾವುದೇ ಗಿಡಗಳನ್ನು ನೆಟ್ಟಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಾವೇ ಗಿಡಗಳನ್ನು ನೆಟ್ಟಿರುವುದಾಗಿ ನುಡಿಯುತ್ತಾರೆ. ಗ್ರಾಮ ಲೆಕ್ಕಿಗರು ಗ್ರಾಮದ ಪ್ರತಿಯೊಂದು ಮನೆಗೆ ಭೇಟಿ ನೀಡಿ ಬೆಳೆ ನೆಟ್ಟಿರುವ ಬಗ್ಗೆ ವರದಿಯನ್ನು ತಯಾರು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿ.ಪಿ. 2 ನ್ನು ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯಲ್ಲಿ ಬೆಳೆಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಯವರ ತಂದೆಯ ನಡುವೆ ಉತ್ತಮ ಸಂಬಂಧ ಇತ್ತು. ಪ್ರತಿವಾದಿಯವರ ತಂದೆಯವರು ದಾವಾಸ್ತಿಯಲ್ಲಿರುವ ಮನೆಗೆ ಬಂದು ಹೋಗುತ್ತಿದ್ದರು. ಪ್ರತಿವಾದಿಯವರ ತಂದೆಯವರು ದಾವಾಸ್ತಿಗೆ ಸಂಬಂಧಪಟ್ಟ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ತಂದೆಯವರ ಮನೆಗೆ ಹೋಗುತ್ತಿರಲಿಲ್ಲ.

ನಿ.ಪಿ. 16 ರ ಮೂಲ ಪ್ರತಿಯನ್ನು ಓ.ಎಸ್. 120/2011 ರಲ್ಲಿ ನನ್ನ ತಂದೆಯವರು ಹಾಜರುಪಡಿಸಿರುತ್ತಾರೆ. ನಿ.ಪಿ. 16 ರ ಪ್ರಕಾರ ನಿರ್ದಿಷ್ಟ ಕರಾರನ್ನು ಮಾಡಿಕೊಡಬೇಕೆಂದು ದಾವೆ ಸಲ್ಲಿಸಿದ್ದು ಇರುವುದಿಲ್ಲ. ದಾವಾಸ್ತಿಯಲ್ಲಿ ಪ್ರತ್ಯೇಕವಾಗಿ 3 ಮನೆಗಳು ಇದ್ದು, ಸದರಿ ಮನೆಗಳು ಸಿರಿಧರ ಮತ್ತು ಜಾನಪ್ಪ ಹಾಗೂ ನನ್ನ ಹೆಸರಿನಲ್ಲಿ ಇದೆ. ದಾವಾಸ್ತಿಯಲ್ಲಿರುವ ಮನೆಗಳು ನನ್ನ ತಂದೆಯ ಕಾಲದಿಂದಲೂ ದಾವಾಸ್ತಿಯ ಸ.ನಂ. 53 ರಲ್ಲಿ ಇತ್ತು. ದಾವಾಸ್ತಿಯಲ್ಲಿರುವ ಮನೆಗಳು ಪೂರ್ವದಿಕ್ಕಿನ ಭಾಗದಲ್ಲಿ ಇವೆ. ಸದ್ರಿ 3 ಮನೆಗಳು, ಕಟ್ಟೆಗೆ ಹಾಗೂ ಬಾವಿ ದಾವಾಸ್ತಿ ಸ.ನಂ. 53 ರಲ್ಲಿ ಇರುತ್ತವೆ. ಸ.ನಂ. 53 ಹಿಸ್ಸಾ 3 ರಲ್ಲಿ ನಮ್ಮ

ಮನೆ ಇರುವ ಬಗ್ಗೆ ತೆರಿಗೆ ಪಾವತಿ ರಶೀದಿಗಳು ಇವೆ. ಸದರಿ ದಾಖಲಾತಿಗಳನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ನನ್ನ ಬಳಿ ದಾವಾಸ್ತಿಯಲ್ಲಿ ಮನೆ ಇರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಗಿಡಗಳನ್ನು ನೆಟ್ಟಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಿ.ಪಿ. 1 ರಲ್ಲಿರುವ ಆಸ್ತಿಯಲ್ಲಿ ನಾನು ಸ್ವಂತ ತೆಂಗು, ಅಡಿಕೆ ಮರಗಳನ್ನು ಬೆಳೆಸಿ ವ್ಯವಸಾಯವನ್ನು ಮಾಡಿಕೊಂಡು ಬಂದಿರುತ್ತೇನೆ. ನಾನು ಸ.ನಂ. 53 ಹಿಸ್ಸಾ 2 ರಲ್ಲಿ ವಾರ್ಷಿಕ ಸುಮಾರು 100 ತೆಂಗಿನ ಕಾಯಿ ಹಾಗೂ 5-6 ಕೆ.ಜಿ ಅಡಿಕೆ ಉತ್ಪನ್ನವಾಗುತ್ತದೆ. ಪ್ರತಿವಾದಿಯವರ ತಂದೆಯ ಹೆಂಡತಿ ಮಕ್ಕಳೊಂದಿಗೆ ಉತ್ತಮ ಸಂಬಂಧ ಇದೆ ಎಂದರೆ ಸಾಕ್ಷಿಯು ಈ ವ್ಯಾಜ್ಯ ಹಾಕಿದ ನಂತರ ಸಂಬಂಧ ಉತ್ತಮವಾಗಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯ ಪಹಣಿ ಪತ್ರಿಕೆಯಲ್ಲಿ ನನ್ನ ತಂದೆಯವರ ಹಾಗೂ ಪ್ರತಿವಾದಿಯವರ ತಂದೆಯವರ ಹೆಸರು ಸುಮಾರು 60 ವರ್ಷಗಳಿಂದ ದಾಖಲಾತಿ ಬಂದಿರುತ್ತದೆ. ಪ್ರತಿವಾದಿಯವರ ತಂದೆಯವರು ಮೃತರಾಗಿ 8 ವರ್ಷ ಆಗಿರುತ್ತದೆ. ನನ್ನ ಮಾವನವರು ಮೃತಪಟ್ಟ ನಂತರ ಪ್ರತಿವಾದಿಯವರ ಹೆಸರು ವಾರಿಸು ದಾಖಲಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಿ.ಪಿ. 2 ರಲ್ಲಿ ದಾಖಲಾಗಿದ್ದು ಕಂಡುಬರುತ್ತದೆ ಎಂದರೆ ಸರಿ. ನನ್ನ ತಂದೆಯವರು ಮೃತಪಟ್ಟ ನಂತರ ಸ.ನಂ. 53 ಹಿಸ್ಸಾ 3 ಆಸ್ತಿಯನ್ನು ನಮ್ಮ ಹೆಸರಿಗೆ ಬರೆದುಕೊಡಬೇಕೆಂದು ಪ್ರತಿವಾದಿಯವರ ತಂದೆಯವರ ಬಳಿ ಹಲವು ಬಾರಿ ಕೇಳಿಕೊಂಡಿರುತ್ತೇನೆ. ಪ್ರತಿವಾದಿಯವರ ತಂದೆಯವರ ವಿರುದ್ಧ ವ್ಯಾಜವನ್ನು ದಾಖಲೆ ಮಾಡಲು ತೊಂದರೆ ಇರಲಿಲ್ಲ. ದಾವಾಸ್ತಿಯಲ್ಲಿ ನಮಗೆ ಹಕ್ಕು ಇದೆ ಎಂದು ವಾರಿಸಾ ಆಗುವಾಗ ತಕರಾರು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ.

ನಿ.ಪಿ. 16 ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ಭೂನ್ಯಾಯ ಮಂಡಳಿಯಿಂದ ಸ.ನಂ. 53 ರಲ್ಲಿ 6 ಗುಂಟೆ ಕ್ಷೇತ್ರ ಪ್ರತಿವಾದಿಯವರ ತಂದೆಯವರ ಹೆಸರಿಗೆ ಹಾಗೂ 5 ಗುಂಟೆ ಕ್ಷೇತ್ರ ನನ್ನ ತಂದೆಯವರ ಹೆಸರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಂದೆಯವರು ದಾವಾಸ್ತಿಯ 6 ಗುಂಟೆ ಕ್ಷೇತ್ರವನ್ನು ಕಬ್ಜಾ ವಹಿವಾಟು ಮಡಿಕೊಂಡು ಬಂದಿದ್ದು ಅವರ ಮರಣಾ ನಂತರ

ಪ್ರತಿವಾದಿಯವರು ಕಬ್ಜಾ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಜಾಗವನ್ನು ಕಬಳಿಸುವ ಉದ್ದೇಶದಿಂದ ದಾವಾಸ್ತಿಯು ನಮ್ಮ ಕಬ್ಜಾದಲ್ಲಿ ಇದೆ ಎಂದು ಸುಳ್ಳು ವಾಜ್ಯವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ದಾವಾಸ್ತಿಯನ್ನು ನಮಗೆ ಬಿಟ್ಟುಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ತಂದೆಯವರ ಬಳಿ ದಾವಾಸ್ತಿಯನ್ನು ನಮ್ಮ ಹೆಸರಿಗೆ ದಾಖಲಿಸಲು ಕೇಳಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ಕಬ್ಜಾ ವಹಿವಾಟು ಮಾಡಿಕೊಂಡು ಬಂದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ಕಾರಣ ಇಲ್ಲದಿದ್ದರು ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ